ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದ ವಾಸುದೇವರಿಗೆ ಅಲ್ಲಿ ಅತ್ಯಂತ ಕಾಳಜಿಯಿಂದ ಮತ್ತು ಆಪ್ತತೆಯಿಂದ ತನ್ನ ಶುಶ್ರೂಶೆ ಮಾಡುತ್ತಿದ್ದ ಶ್ಯಾಮಸುಂದರನೆಂಬ ವಾರ್ಡ್‌ಬಾಯ್ ಒಬ್ಬ ಯಾವುದೋ ಜನ್ಮದ ನಂಟಿರುವವನಂತೆ ಅವರಿಗೆ ಆತ್ಮೀಯನಾಗಿಬಿಟ್ಟಿದ್ದ. ಹಾಗಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗುವ ಮುನ್ನಾದಿನ ಅವರು, "ಶ್ಯಾಮಾ, ಈ ಕೆಲಸ ಬಿಟ್ಟು ನನ್ನೊಂದಿಗೆ ನನ್ನೂರಿಗೆ ಬರುತ್ತೀಯಾ? ಒಬ್ಬಂಟಿಯಾಗಿರುವ ನನಗಲ್ಲಿ ಸಹಾಯ ಮಾಡಲು ನಿನ್ನಂತಹ ಒಳ್ಳೆಯ ಹುಡುಗನೊಬ್ಬ ಬೇಕು. ಸಂಬಳ ನೀನು ಕೇಳಿದಷ್ಟು... ಅಂದ ಹಾಗೆ ನೀನು ಬೆಂಗಳೂರಿನವನೆಯಾ? ಯಾರೆಲ್ಲಾ ಇದ್ದೀರಿ ಮನೆಯಲ್ಲಿ?" ಎಂದು ಕೇಳಿದ್ದರು.

"ನಾನು ಹುಟ್ಟಿ ಬೆಳೆದದ್ದೂ ಎಲ್ಲಾ ಬೆಂಗಳೂರಲ್ಲೇ ಆದರೂ ನಮ್ಮೂರು ಯಾವದೋ ದೂರದ ತೋಟದಳ್ಳಿ ಎಂದು ಅಮ್ಮ ಆಗಾಗ ಹೇಳ್ತಾಳೆ ಸರ್... ಈಗ ನಾವಿಬ್ಬರೇ ಇಲ್ಲಿ ಪಕ್ಕದ ಜೆ.ಪಿ. ನಗರದ ಚಿಕ್ಕ ಬಿಡಾರದಲ್ಲಿದ್ದೇವೆ. ಗಾರೆ ಕೆಲ್ಸದ ಹೆಲ್ಪರ್ ಆಗಿದ್ದ ಅಪ್ಪ ತೀರಿಕೊಂಡು ವರ್ಷಗಳೇ ಆಯ್ತು, ಅಮ್ಮ ಫ್ಲ್ಯಾಟೊಂದರಲ್ಲಿ ಮನೆಗೆಲಸಕ್ಕೆ ಹೋಗ್ತಾಳೆ... ಅವಳೊಬ್ಬಳನ್ನೇ ಬಿಟ್ಟು ನಾನು ಹೇಗೆ ಬರಲಿ..." ಎಂದ ಶ್ಯಾಮಸುಂದರ್. "ಅರೇ ನಾನೂ ತೋಟದಳ್ಳಿಯವನೇ ಕಣಯ್ಯಾ! ಇಬ್ಬರೂ ಅಲ್ಲಿಗೇ ಬಂದುಬಿಡಿ. ತೋಟದಳ್ಳಿಯಲ್ಲಿ ನನಗೆ ಪರಿಚಯವಿಲ್ಲದವರು ಯಾರೂ ಇಲ್ಲ. ನಿನ್ನ ತಾಯ್ತಂದೆಯ ಹೆಸರೇನು ಹೇಳೊಮ್ಮೆ!" ಎಂದು ವಾಸುದೇವರು ಉತ್ಸುಕರಾಗಿ ಕೇಳಿದರು.

"ಸೋಮಶೇಖರ್ ಮತ್ತು ದೇವಕಿ ಸರ್..." ಎಂದಾತ ಉತ್ತರಿಸಿದ. ಆಗ ಒಮ್ಮೆಲೆ ಚಕಿತರಾದ ಅವರು, "ಅಮ್ಮನ ಹೆಸರೇನಂದಿ?" ಎಂದು ತಟ್ಟನೆ ಮತ್ತೆ ಪ್ರಶ್ನಿಸಿದರು.

"ದೇವಕಿ ಸರ್... ಅಪ್ಪ ಮಾತ್ರ ಅವಳನ್ನು 'ದೇವಿ' ಎಂದೇ ಕರೆಯುತ್ತಿದ್ದರು. ಅಪ್ಪನನ್ನು ಹಳ್ಳಿಯಲ್ಲಿ ಸೋಮ ಎಂದು ಕರೆಯುತ್ತಿದ್ದರಂತೆ" ಎಂದ ಶ್ಯಾಮ.

ವಾಸುದೇವರಿಗೀಗ ಒಮ್ಮೆಲೆ ದಿಗ್ಭ್ರಮೆಗೊಳ್ಳುವಂತಾಯಿತು!

ಅವರಿಗೀಗ ಎಲ್ಲವೂ ನಿಚ್ಚಳವಾಗಿತ್ತು! ಯಾಕೋ ಕಳೆದುಹೋದ ಬದುಕಿನ ಅನೇಕಾನೇಕ ನೆನಪುಗಳು ಅವರ ಮನದೆದುರು ಸರಪಣಿಯಂತೆ ಸರಿದುಹೋಗಲಾರಂಭಿಸಿದ್ದವು... ಹೀಗೆ ಗತ ನೆನಪಲ್ಲಿ ಹೂತು ಹೋದಂತೆ ಅವರು ಕುಳಿತಿರುವಾಗಲೇ  ಅವರಿಗೆ ಚಿಕಿತ್ಸೆ ನೀಡುತ್ತಿದ್ದ ಡಾಕ್ಟರ್, "ಹಲೋ ಮಿ, ವಾಸುದೇವ್ ಹೇಗಿದ್ದೀರಾ?" ಎನ್ನುತ್ತಾ ರೂಮೊಳಗೆ ಬಂದರು. ಆಗ ಶ್ಯಾಮಸುಂದರ್ ಅಲ್ಲಿಂದ ಹೊರಗೆ ಹೋದ. ಆತನಲ್ಲಿ ಮತ್ತೇನೋ ಹೇಳಬೇಕೆಂದಿದ್ದ ವಾಸುದೇವರ ಮಾತು ಎದೆಯಲ್ಲೇ ಉಳಿದುಹೋಯಿತು.!

★★★

ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಊರಿಗೆ ಹೊರಟ ವಾಸುದೇವರು, "ಯಾಕೆ ಸರ್? ನಮ್ಮದು ಗುಡಿಸಲು ತರದ ಚಿಕ್ಕ ಬಿಡಾರ..." ಎಂದು ಹಿಂದೇಟು ಹಾಕುತ್ತಿದ್ದ ಶ್ಯಾಮಸುಂದರನನ್ನು ಒತ್ತಾಯಿಸಿ, ಹೊರಡಿಸಿಕೊಂಡು ಆತನ ಬಿಡಾರಕ್ಕೆ ಬಂದೇ ಬಿಟ್ಟಿದ್ದರು! ಮಗನೊಂದಿಗೆ ಅಚಾನಕಾಗಿ ಬಂದ ಸನ್ಯಾಸಿಯಂತೆ ಕಾಣುವ ಈ ಗಡ್ಡಧಾರಿ ಹಿರಿಯರನ್ನು ಕಂಡು ದೇವಕಿಗೊಮ್ಮೆ ಆಶ್ಚರ್ಯವಾಯಿತು! ವಾಸುದೇವರಿಗೋ, ತೊರೆದುಹೋಗಿದ್ದರೂ ಮರೆತು ಹೋಗದ ದೇವಿಯನ್ನು ಕಂಡು ಎದೆತುಂಬಿ ಬಂದ ಗಳಿಗೆಯಾಗಿತ್ತದು! ಅವರ ಬಾಯಿಂದ ಕ್ಷಣಹೊತ್ತು ಮಾತೇ ಹೊರಡದಾಗಿತ್ತು!

"ಆಸ್ಪತ್ರೆಯಲ್ಲಿ ಪರಿಚಯವಾದವರಮ್ಮ, ತೋಟದಳ್ಳಿಯವರು. ಬೇಡವೆಂದರೂ ಕೇಳದೆ